ಮೈಸೂರ ಗೆಜೆಟ್

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಏಪ್ರೆಲ್ ತಾ॥ 2, ಸ್ಯ 1887.

ಗಿಜ್ಞಾ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗಿರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಿನ್ಯಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಫ್ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿವಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫ್ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಪೊಲೀಸ್ ಇಲಾಖಾ.

ತಾರೀಖು 8ನೇ ಮಾರ್ಚೀ 1887.

ಬಾಳೇ ಹೊನ್ನೂರು ಮತ್ತು ಯಡೆಹಳ್ಳಿ ಸ್ಟೇಷನುಗಳ ಸರಹದ್ದಿನ ವಳಗೆ ಯಿರತಕ್ಕ ಕಾಡಕೊಡಗಿ ಗ್ರಾಮದಲ್ಲಿನ ಚಂದಯ್ಯನ ಮನೆಯಿಂದ 1885ನೇ ಇಸವಿ ಮೇ 13ನೇ ತಾರೀಖಿನಲ್ಲಿ ಚೋರಿಯಿಂದ ವಯ್ಯೋಣಾದ ಸುಮಾರು 12 ವರುಷ ವಯಸ್ಸುಳ್ಳ ಗುತ್ತಿ ಯಂಬ ಹುಡುಗಿಯ ಪತ್ತೇ ವಿಷಯದಲ್ಲಿ ಸಾಧಕವಾದ ವರ್ತಮಾನ ಕೊಡುವಂಥಾವರಿಗೆ 50 ರೂಪಾಯಿ ಇನಾಂ ಕೊಡಲ್ಪಡುತ್ತೆ.

ಯಲ್. ರಿಕ್ಕೆಟ್ಸ್,
ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್.